ಶಿವಣ್ಣನ್, ಬೆಂಗಳೂರು

*ಸೃಷ್ಟಿಕರ್ತನಾದ ಬ್ರಹ್ಮನಿಗೆ ಅಷ್ಟೋತ್ತರದಲ್ಲಿ ಎಲ್ಲೂ ಜಾಗವಿಲ್ಲವಲ್ಲಾ, ಬ್ರಹ್ಮ ಅಷ್ಟು ನಿಕೃಷ್ಟನೇ?*



ಬ್ರಹ್ಮನ ಸತಿಯೇ ವಿದ್ಯಾದೇವತೆ. ಯಾವುದೇ ಪತ್ನಿ ಪತಿಯನ್ನು ಹೊಗಳುವುದಿಲ್ಲ. ಆದ್ದರಿಂದ ಬ್ರಹ್ಮನಿಗೆ ಅಷ್ಟೋತ್ತರವಿಲ್ಲ!

ವಿ.ಎಸ್. ಹಿಂದೂಪುರ, ಬಳ್ಳಾರಿ

*ನನ್ನ ಸ್ನೇಹಿತನಿಗೆ ಇಬ್ಬರು ಹೆಂಡಿರು, ಸಾಲ ಇದ್ದರೂ ಮೆತ್ತಗಾಗಿಲ್ಲವಲ್ಲಾ...?*

ಯಾಕಾಗ್ಬೇಕು? ಸಾಲ ತೀರಿಸಕ್ಕೆ ಒಂದಲ್ಲಾಂತ ಎರಡು ಮಾವಂದಿರು. ಒಬ್ಬಳು ಗುರ್ ಅಂದ್ರೆ ಇನ್ನೊಬ್ಬಳ ಮನೆ ಇರತ್ತಲ್ಲ!

ಎಂ.ಸಿ. ಅರುಣ್ ಕುಮಾರ್, ಮೈಸೂರು

*ತರಹೇವಾರಿ ಮೊಬೈಲ್ ಬಂದಮೇಲೆ ಈ ಹುಡುಗಿಯರ ಗಮನ ಸೆಳೆಯುವುದೇ ಕಷ್ಟವಾಗುತ್ತಿದೆಯಲ್ಲಾ...?*

ಸೆಲ್ಫೀ ವಿತ್ ಲವ್ಲೀ ಗರ್ಲ್ಸ್ ಸ್ಕೀಮ್ ಆರಂಭಿಸಿ ನೋಡಿ.

ಪಿ.ಎಸ್. ಶ್ರೀವತ್ಸ, ಬೆಂಗಳೂರು

*ಬಹುತೇಕ ದೇವರು ಯಾಕೆ ಕೂರಲ್ಲ?*




ಭಕ್ತರ ಕಾಟ ಹೆಚ್ಚಾದಾಗ ಓಡಿಹೋಗಲು ರೆಡಿಯಾಗಿರಬೇಕಲ್ಲ!

ಎಂ.ಎಸ್. ಸೋಮಶೇಖರ್, ಮೈಸೂರು

*ಅದೃಷ್ಟವಶಾತ್ ನಿಮಗೆ ಎರಡು ಮೆದುಳುಗಳಿದ್ದಿದ್ದರೆ ನಿಮ್ಮ ಉತ್ತರಗಳನ್ನು ಹೇಗೆ ಕೊಡುತ್ತಿದ್ದಿರಿ?*

ಡಬ್ಬಲ್ ಮೀನಿಂಗ್ ಬರುವಂತೆ!

ಸುಮಿತ್ರಾ ಕೊತ್ವಾಲ್, ಅಜ್ಜರಿಕಾಡು

*ತನ್ನನ್ನು ತಾನು ಕ್ಷಣಕ್ಷಣಕ್ಕೂ ಹೊಗಳಿಕೊಳ್ಳುವುದು ಕೀಳರಿಮೆಯೋ, ಮೇಲರಿಮೆಯೋ, ಮನೋರೋಗವೋ?*

ಅಡ್ವರ್ಟೈಸ್‌ಮೆಂಟ್ ಬುದ್ಧಿ.

ವಿ. ಹೇಮಂತ ಕುಮಾರ್, ಬೆಂಗಳೂರು

*ಮಗು ಅತ್ತರೆ ತಾಯಿ ಹಾಲು ಕುಡಿಸುತ್ತಾಳೆ. ತಾಯಿ ಅತ್ತರೆ?*

ವೃದ್ಧಾಶ್ರಮದ ದಾದಿ ಔಷಧಿ ಕುಡಿಸುತ್ತಾಳೆ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ನೀರಿಗೆ ಉಪ್ಪು ಕರಗುತ್ತದೆ. ಹೆಣ್ಣಿಗೆ?*

ಮುಪ್ಪೂ ಕರಗಿ ಯೌವನದತ್ತ ಹರಿಯುತ್ತದೆ.

ಕುಬೇರಪ್ಪ ಎಂ. ವಿಭೂತಿ, ಹರಿಹರ

*ಹಿರಿಯರು ಕೂದಲಿಗೆ ಬಣ್ಣ ಹಚ್ಚುವುದು ಫ್ಯಾಶನ್‌ಗಾಗಿಯೋ, ರಸಿಕತೆಗಾಗಿಯೋ?*

ಬೋಡುತಲೆಯವರ ಹೊಟ್ಟೆ ಉರಿಸುವುದಕ್ಕಾಗಿ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

*ಸ್ತ್ರೀಯರ ಪ್ರಮುಖ ಅಸ್ತ್ರ ಯಾವುದು?*

ಸ್ತ್ರೀಗೆ ಬಾಯ್ಬಿಡುವ ಗಂಡಿನ ದೌರ್ಬಲ್ಯ.

ರ.ಶಿ. ಯಡಹಳ್ಳಿ, ಬೀಳಗಿ

*ತಾಯಿಯ ಮಡಿಲಿಗೂ, ಪ್ರಕೃತಿಯ ಮಡಿಲಿಗೂ ಇರುವ ವ್ಯತ್ಯಾಸವೇನು?*

ಶೈಶವಕ್ಕೊಂದು, ಶವಕ್ಕೊಂದು.

ಎಸ್.ಜಿ. ಕರನಂದಿ, ಹುನಗುಂದ

*ಗಂಡುಮಕ್ಕಳು ಮನೆ ಬೆಳಗುತ್ತಾರೆ ಎನ್ನುವುದಕ್ಕೆ ಸಾಕ್ಷಿ ಕರೆಂಟು ಬಿಲ್ಲೇ?*

ಕರೆಂಟ್ ಇಲ್ಲದಿರುವಾಗ ಅಗ್ನಿಮೂಲೆಯಲ್ಲಿ ಕೆಂಪಗೆ ನಿಗಿನಿಗಿಸುವ ಸಿಗರೇಟೂ ಹೌದು!

ಎಂ.ಜಿ. ರಾಮಚಂದ್ರ, ಮಂಡಗಳಲೆ

*ವ್ಯಕ್ತಿಯೊಬ್ಬನ ಭವಿಷ್ಯ ಇರುವುದು ಆತನ ಹಣೆಯಲ್ಲೋ ಅಥವಾ ಹಸ್ತದಲ್ಲೋ?*

ಕಲೆಗೆ, ಕೊಲೆಗೆ ಎರಡಕ್ಕೂ ಅನುವಾಗುವ ಹಸ್ತದಲ್ಲೇ.

ಸುರಭಿ ಎಂ.ಸಿ. ಇಂದ್ರ, ಬೆಂಗಳೂರು

*ರೋಗ ನಿವಾರಣೆಗೆ ರಾಮಬಾಣ ಇದೆ. ಅರ್ಜುನಬಾಣ?*

ಬಂಧುನಾಶಕ್ಕೆ. ಶೂರಿಟಿ ಕೇಳುವ ಬಂಧುಗಳೆಲ್ಲ ಅರ್ಜುನನ ಕುಲದವರೇ.

## ಬಹುಮಾನಿತ ಪ್ರಶ್ನೆ

ಎನ್.ಎಸ್. ಆನಂದ್, ಕತ್ತರಿಗುಪ್ಪ

ಕಣ್ಣೀರು ಒರೆಸುವುದಕ್ಕೂ, ಕಣ್ಣೀರು ಬರಿಸುವುದಕ್ಕೂ ವ್ಯತ್ಯಾಸವೇನು ಪ್ರಭುವೆ?

ಚುನಾವಣೆಯೇ: ಚುನಾವಣಾ ಸಮಯದಲ್ಲಿ ಕಣ್ಣೀರು ಒರೆಸುತ್ತಾರೆ, ನಂತರ ಐದು ವರ್ಷ ಕಣ್ಣೀರು ಬರಿಸುತ್ತಾರೆ.

ಎನ್. ವಸಂತಾ, ಬೆಂಗಳೂರು

*ಇಲ್ಲೊಬ್ಬ ಸೊಸೆ ತನ್ನ ಅತ್ತೆ- ಮಾವರನ್ನು ರಾಹು- ಕೇತುಗಳಿಗೆ ಹೋಲಿಸುತ್ತಿದ್ದಾಳಲ್ಲಾ...?*

ಅತ್ತೆಗೆ ದೇಹವಿಲ್ಲ (ಔಟ್ ಆಫ್ ಶೇಪ್), ಮಾವನಿಗೆ ತಲೆ ಇಲ್ಲ ಎಂದು ಹೇಳುವ ರೀತಿ!

ಎನ್. ಗೋಪಾಲರಾವ್, ಬೆಂಗಳೂರು

*ಹೆಂಡತಿಯನ್ನು ಯಾವ ಹಂತದವರೆಗೆ, ಯಾವ ವಯಸ್ಸಿನವರೆಗೆ ಗಂಡ ಹೊಡೆಯಬಹುದು?*

ಎಣ್ಣೆನೀರು ಹಾಕುವಾಗ ನೋವಾಗದವರೆಗೆ. ವಯಸ್ಸಿನ ಮಿತಿ ಇಲ್ಲ.

ಮಹಾವೀರ ಕಾಸರ, ಶಿವಮೊಗ್ಗ

*ಕಾಕ್‌ಟೈಲ್ ಎಂದರೇನು?*



ಕುಡಿಯುವುದಕ್ಕೆ ಮುನ್ನ ಹುಂಜದಂತಿದ್ದವನನ್ನು ನಂತರ ಬಾಲ ಮುದುರಿಕೊಳ್ಳುವಂತೆ ಮಾಡುವ ಡ್ರಿಂಕು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಪ್ರೀತಿ ಹೈವೇ ಇದ್ದಂತೆ; ಮದುವೆ ಮಣ್ಣಿನ ರಸ್ತೆ. ಸಂಸಾರ?*

ಅಲ್ಲಲ್ಲಿ ಹಂಪು, ಹಳ್ಳ ಇರುವ ನಗರದ ಟಾರ್ ರಸ್ತೆ.

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

ಮಾನ ಒತ್ತೆ ಇಟ್ಟು ಸುಳ್ಳು ಹೇಳುವವರು ಇದ್ದಾರಲ್ಲಾ ಇಂದಿನ ಸಮಾಜದಲ್ಲಿ!?

ಶುದ್ಧ ಸುಳ್ಳು. ಒತ್ತೆ ಇಡುವುದಿಲ್ಲ, ಹರಾಜ್ ಹಾಕಿಕೊಂಡುಬಿಡುತ್ತಾರೆ.

■ ರಾಮ್